ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಪರ್ಯಾಯ ಅಭಿವೃದ್ಧಿ ಮಂಡಲಿ ಎಂದು ಏನು ರಚನೆ ಮಾಡಿದ್ದಾರೆ, ಅನೇಕ ಸೊಸೈಟಿಗಳನ್ನು ಮಾಡಿ ತಾವೇ ತಾವೇ ಸೈಟ್ ಹಂಚಿಬಿಟ್ಟು, ಇದರಲ್ಲಿ ಲೂಟಿ ನಡೆಯುತ್ತಿದೆ. ಜಿ.ವಿ.ಕೆ. ರಾವ್ ವರದಿ ಸ್ಪಷ್ಟವಾಗಿ ಹೇಳಿದ್ದಾರೆ. ನೆಲೆಗಳ್ಳರು ಎಂದು ಇದೇ ಸದನದಲ್ಲಿ ಪ್ರಸ್ತಾಪವಾಗಿತ್ತು. ನಾನು ಹೇಳುತ್ತೇನೆ, ಹೌಸಿಂಗ್ ಸೊಸೈಟಿ ಅವರ ಹತ್ತಿರ ಇವರು ಸೈಟನ್ನು ವ್ಯಾಪಾರ ಮಾಡಿ ಹಂಚುವುದಕ್ಕೆ ಹೋಗಬೇಡಿ. ಪ್ರಾಧಿಕಾರವೇ ನೀವು ಹಿಂದಕ್ಕೆ ಸೈಟ್‌ಗಳನ್ನು ತೆಗೆದು ಕೊಂಡು ಕೊಟ್ಟರೆ ಒಳ್ಳೆಯದು.

MR. SPEAKER :- Mr. Anant Nag, you please make use of the assistance of Mr. Roshan Baig. He will be very much useful to you in this regard as Home Minister. It is only that Department which can give solution to all you problems. We are citizens. There are 3 categories of animals, (1) Wild animals, 2) Pet animals and 3) Bad animals. Well, I put them under the first category. They are not useful to anybody. ಬಾಲಕೃಷ್ಣರವರೇ, ತಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :- ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 15 ನೇ ಪಟ್ಟಿಯಲ್ಲಿರುವ 61 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ :- ಕೆ.ಎ.ಎಸ್., ಕೆ.ಪಿ.ಎಸ್. ಕೆ.ಎಫ್.ಎಸ್.ನವರಿಗೆ ಬಡ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 915 (1802)

ಶ್ರೀ ಅಯನೂರು ಮಂಜುನಾಥ (ಹೊಸನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಕೆಎಎಸ್, ಕೆಸಿಎಸ್, ಕೆಎಫ್ಎಸ್‌ನವರಿಗೆ ಬಡ್ತಿ ಸೇವೆಯ ಶೇಕಡ ಎಷ್ಟು ಪ್ರಮಾಣದಲ್ಲಿ ಐಎಎಸ್, ಐಪಿಎಸ್, ಐಎಫ್ಎಸ್ ನೀಡಲಾಗುತ್ತಿದೆ ; ಕಳೆದ 4 ವರ್ಷಗಳಲ್ಲಿ ರಾಜ್ಯದ ಶೇಕಡವಾರು ನಿಯಮದನ್ವಯ ಎಷ್ಟು ಜನರಿಗೆ ಬಡ್ತಿ ನೀಡಲಾಗಿದೆ (ವಿವರವಾದ ಪಟ್ಟಿ ನೀಡುವುದು)

ಆ) ಆಡಳಿತ ಭಾಷೆಯಾಗಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಯಾಗುವ ದಿಸೆಯಲ್ಲಿ ಕನ್ನಡಿಗ ಅಧಿಕಾರಿಗಳು ಉನ್ನತ ಸ್ಥಾನದಲ್ಲಿರುವುದು ಸಮಂಜಸವಲ್ಲವೆ?

ಇ) ಹಾಗಿದ್ದಲ್ಲಿ ಈಗಿರುವ ಭಾರತೀಯ ಸೇವೆ ಮತ್ತು ಕರ್ನಾಟಕ ಆಡಳಿತ ಸೇವೆಯಲ್ಲಿ ಬಡ್ತಿ ಪ್ರಮಾಣವನ್ನು ಶೇಕಡವಾರು ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಜೆ. ಹೆಚ್. ಪಟೀಲ್ (ಮುಖ್ಯ ಮಂತ್ರಿಗಳು) :-

ಅ) ಭಾ.ಆ.ಸೇ. (ನೇಮಕಾತಿ) ನಿಯಮಗಳನ್ನು 1954 ರ ಅನುಸಾರ ಐಎಎಸ್ ಹಿರಿಯ ಕೇಡರ್ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಮೀಸಲು ಹುದ್ದೆಗಳ ಒಟ್ಟು ಸಂಖ್ಯೆಯ ಶೇ.33 1/3 ರಷ್ಟು ಹುದ್ದೆಗಳನ್ನು ರಾಜ್ಯದ ಕೆಎಎಸ್ ಮತ್ತು ನಾನ್ ಕೆಎಎಸ್ ಅಧಿಕಾರಿಗಳ ಮುಂಬಡ್ತಿಯಿಂದ ತುಂಬಬೇಕಾಗಿದೆ.

ಭಾ.ಪೋ.ಸೇ. (ನೇಮಕಾತಿ) ನಿಯಮಗಳು 1954 ರ ಅನುಸಾರ ಐಪಿಎಸ್ ಹಿರಿಯ ಕೇಡರ್ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಮೀಸಲು ಹುದ್ದೆಗಳ ಒಟ್ಟು ಸಂಖ್ಯೆಯ ಶೇ. 331/3 ರಷ್ಟು ಹುದ್ದೆಗಳನ್ನು ರಾಜ್ಯದ ಕೆಪಿಎಸ್ ಅಧಿಕಾರಿಗಳ ಮುಂಬಡ್ತಿಯಿಂದ ತುಂಬಬೇಕಾಗಿದೆ.

ಭಾ.ಆ.ಸೇ (ನೇಮಕಾತಿ) ನಿಯಮಗಳು 1966ರ ಅನುಸಾರ ಐಎಫ್ಎಸ್ ಹಿರಿಯ ಕೇಡರ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಮೀಸಲು ಹುದ್ದೆಗಳ ಒಟ್ಟು ಸಂಖ್ಯೆಯ ಶೇ. 33 1:3 ರಷ್ಟು ಹುದ್ದೆಗಳನ್ನು ರಾಜ್ಯದ ಕೆಎಫ್ಎಸ್ ಅಧಿಕಾರಿಗಳ ಮುಂಬಡ್ತಿಯಿಂದ ತುಂಬಬೇಕಾಗಿದೆ.

ಹಿಂದಿನ ನಾಲ್ಕು ವರ್ಷಗಳಲ್ಲಿ,

ಭಾ.ಆ.ಸೇ.ಗೆ ಮುಂಬಡ್ತಿ ನೀಡಿದ ಅಧಿಕಾರಿಗಳ ಸಂಖ್ಯೆ : 17

ಭಾ.ಪೋ.ಸೆ.ಗೆ ಮುಂಬಡ್ತಿ ನೀಡಿದ ಅಧಿಕಾರಿಗಳ ಸಂಖ್ಯೆ : 6

ಭಾ.ಆ.ಸೇ.ಗೆ ಮುಂಬಡ್ತಿ ನೀಡಿದ ಅಧಿಕಾರಿಗಳ ಸಂಖ್ಯೆ : 7

(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಹೌದು.

ಇ) ಮೇಲೆ ತಿಳಿಸಿದ ನಿಯಮಗಳಡಿಯಲ್ಲಿ ಭಾರತ ಸರ್ಕಾರ ನಿಗದಿಗೊಳಿಸಿರುವ ಬಡ್ತಿ ಕೋಟಾವು ಎಲ್ಲಾ ರಾಜ್ಯಗಳಿಗೆ ಅನ್ವಯಿಸುತ್ತದೆ.

ANNEXURE

OFFICERS PROMOTED DURING THE LAST FOUR YEARS

1993	1994	1995	1996
		I.A.S.	
1.D.S. Aswath	1. S.Z. Pasha	1.G.V. Kongwad	1.B.P.Kaniram
2. H. Shashidhara	2. B.A. Harish Gowda	2. C.N. Seetharam	
3. P.N. Sreenivasachari	3. B.R. Jayarama raja Urs	3. G.M. Dhananjaya	
	4. P. Ganeshan	4. G.S. Narayanaswamy	
	5. S.D. Nayak	5. Baburao Mudbi	
	6. S. G. Hegde	6. K.R. Shashidhara	
	7. Azeezula Baig		
		I.P.S	
1. U Nissar	1. A.G. Ayachit	1. J.V. Nayak	-NIL-
		2. Gopal Hosur	
		3. M.C. Narayana Gowda	
		4. Md. Wazeer Ahmed	
		I.F.S	
1. B.G. Mugdur	1. Jawaid		1. K.M. Muthappa
2.A.C. Keshava Murthy	Hussain Khan	-NIL-	2. Jayanara simharai
			3. S.Shekar
			4. Shan thappa